**Vijaya Karnataka**

**Date:** 03-04-2021 **Page No:** 8

**Edition:** Mysore **Language:** Kannada

# ಉತ್ಪಾದನಾ ವಲಯದಲ್ಲಿ ಜಗತ್ತನ್ನೇ ಆಳಲಿದೆ ಭಾರತ

## ಎಸ್‌ಡಿಎಂಐಎಂಡಿ ಕಾಲೇಜಿನ 26ನೇ ಘಟಿಕೋತ್ಸವದಲ್ಲಿ 170ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

**ವಿಕ ಸುದ್ದಿಲೋಕ** ಮೈಸೂರು

ಇನ್ನೂ 10 ವರ್ಷಗಳಲ್ಲಿ ಉತ್ಪಾದನಾ ವಲಯದಲ್ಲಿ ಪ್ರಪಂಚವನ್ನು ನಮ್ಮ ದೇಶ ಆಳುತ್ತದೆ ಎಂದು ಟೊಯೊಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ ಕಂಪನಿಯ ಉಪ ವ್ಯವಸ್ಥಾಪಕ ನಿರ್ದೇಶಕ ಟಿ. ಆರ್.ಪರಶುರಾಮನ್ ಹೇಳಿದರು.

ನಗರದ ಎಸ್‌ಡಿಎಂಐಎಂಡಿ ಕಾಲೇಜಿನ 26ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ''ಬದಲಾವಣೆಯ ಹಾದಿಯಲ್ಲಿ ಭಾರತ ದಾಪುಗಾಲು ಇರಿಸುತ್ತಿದೆ. ಜಗತ್ತಿನಲ್ಲೇ ಅಧಿಕ ಯುವ ಸಮುದಾಯವನ್ನು ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ,'' ಎಂದರು.

''ನಮ್ಮ ದೇಶದಲ್ಲಿರುವಷ್ಟು ಯುವಜನತೆ ಬೇರೆ ಎಲ್ಲೂ ಇಲ್ಲ. ಚೀನಾ, ಜಪಾನ್‌ನಂತಹ ಮುಂದುವರಿದ ದೇಶಗಳಲ್ಲಿ ಮಧ್ಯ ವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಸೇವಾ ವಲಯದಲ್ಲಿ ಮುಂದಿರುವ ಭಾರತ ಉತ್ಪಾದನಾ ವಲಯದಲ್ಲಿ ತನ್ನ ಛಾಪು ಮೂಡಿಸುತ್ತದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

''2025ರ ವೇಳೆಗೆ ನಾವು 5 ಟ್ರಿಲಿಯನ್ ಆರ್ಥಿಕತೆ ತಲುಪುವುದು ಖಚಿತ. ಮುಂದಿನ ಕೆಲವು ವರ್ಷಗಳಲ್ಲಿ ಜಿಡಿಪಿ ಹೆಚ್ಚಾಗುತ್ತದೆ. ಸರಕಾರ ಮೂಲ ಸೌಕರ್ಯಗಳಿಗೆ ಹೆಚ್ಚಿನ ಹಣ ಖರ್ಚು ಮಾಡುತ್ತದೆ. ಹಿಂದೆ ವಿದೇಶಗಳಲ್ಲಿ ಭಾರತದ ಭವಿಷ್ಯವೇನು ಎಂದು ಅಲ್ಲಿನ ಜನರು ಹೇಳುತ್ತಿದ್ದರು. ಈಗ ಬೇರೆ ದೇಶಗಳಿಗೆ ಹೋದರೆ ಭಾರತವೇ ಭವಿಷ್ಯ ಎನ್ನುತ್ತಾರೆ. ನಮ್ಮ ಎಷ್ಟೋ ವಿದ್ಯಾರ್ಥಿಗಳು ವಿದೇಶಗಳಲ್ಲಿ ಕೆಲಸ ಮಾಡಿ ತಮ್ಮ ಛಾಪು ಮೂಡಿಸುತ್ತಿದ್ದರೆ, ಇನ್ನು ಕೆಲವರು ಇಲ್ಲಿಗೆ ಮರಳುತ್ತಿದ್ದಾರೆ. ಇದು ನಮ್ಮ ದೇಶದ ಶಕ್ತಿ,'' ಎಂದರು.




**ನಗರದ ಎಸ್‌ಡಿಎಂಐಎಂಡಿ ಕಾಲೇಜಿನ ನಡೆದ 26ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಯಿತು. ಧರ್ಮಾಧಿಕಾರಿ ಡಾ.ಡಿ.ವಿರೇಂದ್ರ ಹೆಗ್ಗಡೆ , ಟೊಯೊಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ ಕಂಪನಿಯ ಉಪ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್.ಪರಶುರಾಮನ್ ಸೇರಿದಂತೆ ಇನ್ನಿತರರು ಇದ್ದರು.**

''ಭಾರತದಂತಹ ಮುಂದುವರಿಯುತ್ತಿರುವ ದೇಶಗಳಲ್ಲಿ ಜನರು ಹೇಳಿದ ಮಾತನ್ನು ಅರ್ಥಮಾಡಿಕೊಳ್ಳುವುದರಲ್ಲಿ ಹಿಂದಿದ್ದಾರೆ. ಆದ್ದರಿಂದ ನಮ್ಮ ದೇಶಕ್ಕೆ ಹೆಚ್ಚು ನಿರ್ವಹಣಾ ವಿದ್ಯಾರ್ಥಿಗಳ (ಮ್ಯಾನೇಜ್‌ಮೆಂಟ್ ಸ್ಟುಡೆಂಟ್ಸ್) ಅವಶ್ಯಕತೆ ಇದೆ. ಜನರನ್ನು ಅರ್ಥ ಮಾಡಿಕೊಂಡು ಅವರ ಬಳಿ ಕೆಲಸ ಮಾಡಿಸುವ ಚಾಕಚಕ್ಯತೆ ಇರುವ ವಿದ್ಯಾರ್ಥಿಗಳು ದೇಶಕ್ಕೆ ಬೇಕು,'' ಎಂದು ಹೇಳಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವಿರೇಂದ್ರ ಹೆಗ್ಗಡೆ ಮಾತನಾಡಿ, ''ಕಳೆದ 10 ವರ್ಷಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರ ಬದಲಾಣೆ ಕಂಡಿದೆ. ನಿರ್ವಹಣೆ ಯಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಠ್ಯ ಜತೆಗೆ ಪ್ರಾಯೋಗಿಕವು ಮುಖ್ಯ. ಆದ್ದರಿಂದ ಕ್ಷೇತ್ರ ಅಧ್ಯಯನ, ಪ್ರಾಜೆಕ್ಟ್‌ಗಳು ಸೇರಿದಂತೆ ನಾನಾ ವಿಷಯಗಳನ್ನು ಕಲಿಕೆಯಲ್ಲಿ ಸೇರಿಸಲಾಗಿದೆ. ವಿದ್ಯಾರ್ಥಿಗಳಿಗೆ ಮೌಲ್ಯಗಳು, ಸಾಮಾಜಿಕ ಜವಾಬ್ದಾರಿ, ಸುಸ್ಥಿರತೆಯ ಬಗ್ಗೆ ಅರಿವು ಮೂಡಿಸಬೇಕಿರುವುದು ಪ್ರಮುಖವಾಗಿದೆ. ಈ ಕೆಲಸಗಳನ್ನು ಎಸ್‌ಡಿಎಂಐಎಂಡಿ ಮಾಡುತ್ತಿದೆ,'' ಎಂದು ತಿಳಿಸಿದರು. 170ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಿ.ಜಿ.ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪದವಿ ಪ್ರದಾನ ಮಾಡಲಾಯಿತು. 2019-21ನೇ ಸಾಲಿನ 6 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು. ಪ್ರೇರಣಾ ಎಂಬ ವಿದ್ಯಾರ್ಥಿನಿ ವ್ಹೀಲ್‌ಚೇರ್‌ನಲ್ಲಿ ಬಂದು ಪದಕ ಸ್ವೀಕರಿಸಿದರು. ವಿದ್ಯಾರ್ಥಿಗಳಾದ ಗೌರವ್ ಮಹೇಶ್ವರಿ, ಆರ್. ಅಭಿಷೇಕ್, ರಿಷಭ್ ಕುಮಾರ್, ಆಯೆಷಾ ನೇಹಲಾ, ಅಮನ್ ಕುಮಾರ್, ಖುಷ್ಬೂ ರಾಣಿ ಅವರು ಚಿನ್ನದ ಪದಕ ಪಡೆದುಕೊಂಡರು. ಕಾಲೇಜಿನ ಶೈಕ್ಷಣಿಕ ವಿಭಾಗದ ಉಪನಿರ್ದೇಶಕ, ಚೇರ್ಮನ್ ಡಾ.ಎಚ್. ಗಾಯತ್ರಿ, ಉದ್ಯಮಿ ಪವನ್ ಜಿ.ರಂಗ, ಡಿ. ಸುರೇಂದ್ರ ಕುಮಾರ್, ಡಾ.ಅನಂತ್ ಕೊಪ್ಪಾರ್, ಡಾ.ಆರ್.ಇಂದಿರಾ ಇದ್ದರು.